

ಡಾ.ವಿನೋದ ಛೆಬ್ಬಿ

**ದಾಂಪತ್ಯವು ಮಲೆತುನಿಂತ ನೀರಾದಾಗ ಅಪಹಾಸ್ಯ, ವ್ಯಂಗ್ಯ, ವಿಡಂಬನೆ ರಾರಾಜಿಸುತ್ತವೆ!**

# 125: ಬದಲಾವಣೆ ಅನಿವಾರ್ಯ!

ಸುಖೀ ದಾಂಪತ್ಯದ ಬಗೆಗೆ ಓದುಗರಿಂದ ಅನಿಸಿಕೆಗಳು ಕೇಳಿಬರುತ್ತಿವೆ. 'ಪ್ರತಿವಾರ ಒಂದೇ ವಿಷಯವನ್ನು ಚೂಯಿಂಗ್ ಗಮ್‌ನಂತೆ ಎಳೆಯುತ್ತಿರುವುದು ಬೋರ್ ಹೊಡೆಸುತ್ತಿದೆ. ದಾಂಪತ್ಯ-ಆರೋಗ್ಯಕ್ಕೆ ಪೂರಕವಾದ ವಿಚಾರಗಳು ಬರಹದಲ್ಲಿದ್ದರೆ ಚೆನ್ನ' ಇದು ಒಬ್ಬರದಲ್ಲ, ಅನೇಕರ ಅನಿಸಿಕೆ ಆಗಿರಲೂ ಸಾಕು. ಇಂಥ ಅಭಿಪ್ರಾಯಗಳನ್ನು ಜೀರ್ಣಿಸಿಕೊಳ್ಳುತ್ತಿರುವಾಗ ಹೊರಬಂದ ಕೆಲವು ವಿಚಾರಗಳು ದಾಂಪತ್ಯಕ್ಕೆ ಹೇಗೆ ಪ್ರಸ್ತುತವಾಗುತ್ತವೆ ಎಂಬುದನ್ನು ಸ್ವಲ್ಪ ವಿವರವಾಗಿ ಹಂಚಿಕೊಳ್ಳುತ್ತಿದ್ದೇನೆ.

ಯಾವುದೇ ಆರೋಗ್ಯಕರ ದಾಂಪತ್ಯದಲ್ಲಿ ಸಂಗಾತಿಗಳ ನಡುವಿನ ಸಂಬಂಧವು ಸದಾ ಚಲನಶೀಲವಾಗಿದ್ದು (dynamic) ಬದಲಾವಣೆ ಹೊಂದುತ್ತಿರುತ್ತದೆ. ಚಲನಶೀಲತೆ ಇಲ್ಲದಿದ್ದರೆ ದಾಂಪತ್ಯವು ಮಲೆತು ನಿಂತ ನೀರಾಗಿ ನೀರಸವಾಗುತ್ತದೆ. ಸಂಬಂಧ ಯಾಂತ್ರಿಕವಾಗುತ್ತದೆ. ದಾಂಪತ್ಯವು ಇದ್ದೂ ಸತ್ತಂತೆ ಆಗುವ ಮಟ್ಟಕ್ಕೆ ಹೋಗುತ್ತದೆ. ಆಗಲೇ ಪರಸ್ಪರರನ್ನು ವಿಡಂಬನೆ ಮಾಡುವ, ಹಾಯಿಸಿ ಅನ್ನುವ ವ್ಯಂಗ್ಯ, ಅಪಹಾಸ್ಯ, ಜೋಕುಗಳು ಹುಟ್ಟಿಕೊಳ್ಳುತ್ತವೆ. ಅಪಹಾಸ್ಯ ಕಾಲಿಡುತ್ತಿದೆ ಎಂದರೆ ದಾಂಪತ್ಯ ಮಲೆತುನಿಂತ ನೀರಾಗಿದೆ ಎಂದೇ ಅರ್ಥ. ಗಂಡಹೆಂಡತಿಯ ಸಂಬಂಧಗಳ ಬಗೆಗೆ ಪತ್ರಿಕೆಗಳಲ್ಲಿ, ವಾಟ್ಸಪ್‌ನಲ್ಲಿ ಹರಿದಾಡುವ ವ್ಯಂಗ್ಯಚಿತ್ರಗಳನ್ನು ಸೈತಾನಭಾವದಿಂದ ಸವಿಯುವುದು ಆಗಲೇ ಸಾಧ್ಯವಾಗುತ್ತದೆ. ಇದು ದಾಂಪತ್ಯವು ಚಲನಶೀಲತೆಯನ್ನು ಕಳೆದುಕೊಂಡ ಢಾಳಾದ ಲಕ್ಷಣ.

ಈ ಚಲನಶೀಲತೆಯ ಉದ್ದೇಶವೇನು? ದಾಂಪತ್ಯದಲ್ಲಿ ಆರೋಗ್ಯಕರ ಬದಲಾವಣೆ ತರುವುದು, ಹಾಗೂ ತನ್ಮೂಲಕ ದಾಂಪತ್ಯದ ಬೆಳವಣಿಗೆ ಹಾಗೂ ವಿಕಾಸ. ಆರೋಗ್ಯಕರ ಬದಲಾವಣೆ ಯಶಸ್ವೀ ದಾಂಪತ್ಯದ ಜೀವಾಳ ಆಗುತ್ತದೆ.

ಪ್ರತಿ ದಾಂಪತ್ಯವೂ ಬೆಳೆಯುತ್ತ ಬದಲಾವಣೆ ಹೊಂದಿದ ಹಾಗೆ ಒಂದು ತಲೆಮಾರಿನ ಸರಿಸುಮಾರು ಎಲ್ಲರ ದಾಂಪತ್ಯಗಳೂ ಸಮಕಾಲೀನ ಸಂಗತಿಗಳಿಂದ ಪ್ರಭಾವಿತವಾಗಿ ಬದಲಾವಣೆ ಹೊಂದುತ್ತಿರುತ್ತವೆ. ತಲೆಮಾರುಗಳು ಬದಲಾದಂತೆ ಪತಿಪತ್ನಿಯರ ಸಂಬಂಧದ ನೀತಿನಿಯಮಗಳು ಬದಲಾಗುತ್ತವೆ. ಅಷ್ಟೇ ಅಲ್ಲ, ತಲೆಮಾರಿನ ಬದಲಾವಣೆಯು ಸಂಸ್ಕೃತಿಯ ಬದಲಾವಣೆಯೂ ಹೌದು. ನಮ್ಮ ಈಗಿನ ಬದಲಾವಣೆಯು ಪುರುಷಪ್ರಧಾನ ಸಂಸ್ಕೃತಿಯ ಬಗೆಗಿದೆ.

ಶತಶತಮಾನಗಳಿಂದಲೂ ನಮ್ಮಲ್ಲಿ ಪುರುಷಪ್ರಧಾನ ವ್ಯವಸ್ಥೆಯದೇ ಮೇಲುಗೈಯಾಗಿದೆ. ಇದರ ಮೂಲಕ ಹೆಂಗಸರಿಗಿಲ್ಲದ ಕೆಲವು ಅನುಕೂಲತೆಗಳು ಗಂಡಸರಿಗೆ ಗಂಡುಸಾದ ಮಾತ್ರಕ್ಕೆ ಬಳುವಳಿಯಾಗಿ ಬಂದಿವೆ. ಇತ್ತೀಚಿನ ದಶಕಗಳಲ್ಲಿ ಇದರ ಬಗೆಗೆ ವ್ಯಾಪಕ ಚರ್ಚೆ ನಡೆಯುತ್ತಿದ್ದು, ಕ್ರಮೇಣ ಸ್ತ್ರೀ ಸ್ವಾತಂತ್ರ್ಯದ ಮಹತ್ವವು ಅರಿವಿಗೆ ಬರುತ್ತಿದೆ. ತಲೆಮಾರುಗಳಿಂದ ಹತ್ತಿಕ್ಕಲ್ಪಟ್ಟ ಸ್ತ್ರೀವಾದವು (feminism) ಈಗೀಗ ಮುಂಚೂಣಿಗೆ ಬರುತ್ತ ವ್ಯಾಪಕವಾಗುತ್ತಿದೆ. ಸ್ತ್ರೀವಾದದ ಉದ್ದೇಶವು ಹೆಣ್ಣನ್ನು ಗಂಡಿಗಿಂತ ಹೆಚ್ಚು ಸಮಾನ ಮಾಡುವುದಲ್ಲ. ಬದಲಾಗಿ ಹೆಣ್ಣಿಗೆ ಸ್ವತಂತ್ರ ಸ್ಥಾನವನ್ನು ಕಲ್ಪಿಸುವುದು, ಹೆಣ್ಣಿನ ವ್ಯಕ್ತಿತ್ವ ವಿಕಾಸಕ್ಕೆ ಅನುವು ಮಾಡಿಕೊಡುವುದು. ಸ್ತ್ರೀವಾದವು ವ್ಯಾಪಕವಾದರೆ ಅದು ಗಂಡುಹೆಣ್ಣುಗಳ ನಡುವಿನ ಸಂಬಂಧವನ್ನು ಚೈತನ್ಯಶೀಲವಾಗಿ ಮಾಡುತ್ತದೆ.

ಪ್ರಸ್ತುತ ತಲೆಮಾರಿನ ಬೃಹತ್ತಾದ ಸಮಸ್ಯೆ ಏನೆಂದರೆ ಸ್ತ್ರೀವಾದವನ್ನು ಎಲ್ಲ ಗಂಡಸರೂ ಒಪ್ಪಿಕೊಳ್ಳುತ್ತಿಲ್ಲ — ಒಪ್ಪಿಕೊಂಡರೆ ಗಂಡಸಿಗೆ ಬಳುವಳಿಯಾಗಿ ಬಂದ ಕೆಲವು ಸವಲತ್ತುಗಳು ದೊರಕಲಾರವು ಎಂಬ ಭಯವಿದೆ. ಹಾಗೆಯೇ, ಹೆಣ್ಣೆಂದರೆ ಹೀಗಿರಬೇಕು ಎಂದು ತನ್ನ ಸ್ವಾರ್ಥಾಪೇಕ್ಷೆಯನ್ನು ಗಮನದಲ್ಲಿಟ್ಟುಕೊಂಡು ವ್ಯಾಖ್ಯಾನಿಸುವ ಗಂಡಿನ ಅಹಮಿಕೆಗೆ ಹೊಡೆತ ಬೀಳುವ ಸಂಭವವಿದೆ. ಈ ಕಾರಣದಿಂದ ಪ್ರಸ್ತುತ ತಲೆಮಾರಿನ ದಾಂಪತ್ಯ ಸಮಸ್ಯೆಗಳು ಹುಟ್ಟಿ ವಿಷಮಯ ಪ್ರಭಾವ ಬೀರುತ್ತಿವೆ.

ಪುರುಷ ಪ್ರಧಾನ ವ್ಯವಸ್ಥೆಯೂ ಸ್ತ್ರೀಪುರುಷರ ಕಾಮಸಂಬಂಧದ ಸೂಕ್ಷ್ಮತೆಯನ್ನು ಹಾಳುಗೆಡವುತ್ತದೆ. ಸ್ತ್ರೀಯರನ್ನು ಪುರುಷರಿಗೆ ಸುಖಕೊಡುವ ಯಂತ್ರವೆಂದು ವಿಷಯೀಕರಿಸುವುದು (objectification), ಗಂಡಿನ ಕಾಮವಾಂಛಲ್ಯಕ್ಕೆ ತಕ್ಕಂತೆ ಹೆಣ್ಣಿನ ಲೈಂಗಿಕತೆಯನ್ನು ಹುಚ್ಚುಮೋಹದಿಂದ ವ್ಯಾಖ್ಯಾನಿಸುವುದು, ಸಂತಾನಪ್ರಾಪ್ತಿಯಿಂದಲೇ ಸ್ತ್ರೀತ್ವವು ಸಾರ್ಥಕವಾಗುತ್ತದೆ ಎಂಬ ಹುಸಿಮೌಲ್ಯಕ್ಕೆ ಒತ್ತುಕೊಡುವ ಧೋರಣೆಗಳು ದಾಂಪತ್ಯದಲ್ಲಿ ಹೆಣ್ಣಿನ ಮೇಲೆ ನಾನಾ ರೀತಿಯ ಸೂಕ್ಷ್ಮರೂಪದ ಅತ್ಯಾಚಾರಗಳಿಗೆ ಅವಕಾಶ ಮಾಡಿಕೊಡುತ್ತವೆ. ಇದರಿಂದ ಹೆಣ್ಣು ನಿಸ್ಸಹಾಯಕ ಆಗುತ್ತಾಳೆ. ಇಬ್ಬರು ಸಮಾನ ವ್ಯಕ್ತಿಗಳ ನಡುವೆ ಆರೋಗ್ಯಕರ ದಾಂಪತ್ಯ ನಡೆಯುತ್ತದೆ. ಅಸಹಾಯಕ ಹೆಣ್ಣಿನ ಜೊತೆಗೆ ನಡೆಸುವುದು ದರಬಾರು ಆಗುತ್ತದೆ.

ಇದಕ್ಕೆ ಪರಿಹಾರವೇನು? ಸ್ತ್ರೀವಾದವನ್ನು — ಸ್ತ್ರೀಯರನ್ನು ಮೊದಲು ಮಾಡಿಕೊಂಡು — ಎಲ್ಲರೂ ಒಪ್ಪಿಕೊಳ್ಳಬೇಕು. ಗಂಡು ತನ್ನನ್ನು ತಾನು ಅರ್ಥಮಾಡಿಕೊಳ್ಳುತ್ತ ಗಂಡುಜಾತಿಗಿರುವ ಸವಲತ್ತುಗಳನ್ನು ಬಿಟ್ಟುಕೊಡಬೇಕು. ಗಂಡು ತನ್ನ ಮೇಲೆ ಹೆಣ್ಣಿನ ಪ್ರಭಾವವನ್ನು ಒಪ್ಪಿಕೊಳ್ಳದ ಹೊರತು ದಾಂಪತ್ಯದಲ್ಲಿ ಸೌಹಾರ್ದತೆಯನ್ನು ತರುವುದು ಕಷ್ಟಸಾಧ್ಯ ಎಂದು ವಿಶ್ವವಿಖ್ಯಾತ ದಾಂಪತ್ಯ ಚಿಕಿತ್ಸಕ ಜಾನ್ ಗಾಟ್‌ಮನ್ ಹೇಳುತ್ತಾರೆ.

ಇನ್ನು ಹೆಣ್ಣಿನ ಲೈಂಗಿಕತೆಯ ಬಗೆಗೆ ಒಂದು ಮಾತು: ನಮ್ಮಲ್ಲಿ ಗಂಡಿನ ಕಾಮಪ್ರಜ್ಞೆಗೆ ಕೊಟ್ಟಷ್ಟು ಮಹತ್ವವನ್ನು ಹೆಣ್ಣಿನ ಕಾಮಪ್ರಜ್ಞೆಗೆ ಕೊಟ್ಟಿದ್ದೇವೆಯೆ? ಇಲ್ಲವೆಂದೇ ನನ್ನನ್ನು ಭೇಟಿಯಾದ ಮಹಿಳೆಯರು ಹಂಚಿಕೊಂಡಿದ್ದಾರೆ. ಹೆಣ್ಣಿನ ಕಾಮಪ್ರಜ್ಞೆಯು ಗಂಡಿನದಕ್ಕಿಂತ ಭಿನ್ನವಾಗಿದೆ ಎಂದು ಹೆಚ್ಚಿನ ಗಂಡಸರು ಅರ್ಥಮಾಡಿಕೊಂಡಿಲ್ಲ. ಇದಕ್ಕೆ ದುರದೃಷ್ಟಕರ ಕಾರಣಗಳಲ್ಲಿ ಒಂದೆಂದರೆ ಹೆಣ್ಣಿನ ಕಾಮಾಸಕ್ತಿಯನ್ನೂ ಗಂಡಿನಿಂದಲೇ ವ್ಯಾಖ್ಯಾನಿಸಲಾಗಿದೆ! ಉದಾಹರಣೆಗೆ, ಹೆಚ್ಚಿನ ಗಂಡಸರು ಕಾಮಕೂಟವು ತಮಗಿಷ್ಟವಾದ ರೀತಿಯಲ್ಲೇ ಹೆಂಗಸರಿಗೂ ಇಷ್ಟ ಎಂದು ಭಾವಿಸಿದ್ದಾರೆ. ಹೆಚ್ಚುಹೊತ್ತು ವೀರ್ಯಸ್ಖಲನವನ್ನು ತಡೆಹಿಡಿದು ಸಂಭೋಗಿಸುವುದು ಹೇಗೆ ಎನ್ನುವುದನ್ನು ತಲೆಕೆಡುವ ಮಟ್ಟಿಗೆ ಯೋಚಿಸುವ ಸಾವಿರಾರು ಪುರುಷರನ್ನು ನೋಡಿದ್ದೇನೆ. ಹೆಣ್ಣಿನ ಭಾವನೆಗಳೊಂದಿಗೆ ತನ್ನ ಭಾವನೆಗಳನ್ನು ಮೇಳೈಸುವುದು ಕಾಮಕೂಟಕ್ಕೆ ಮುಖ್ಯವೆಂದು ಇವರಲ್ಲಿ ಯಾರೂ ಪರಿಗಣಿಸುವುದಿಲ್ಲ. ಹೆಣ್ಣಿನ ಲೈಂಗಿಕತೆಯನ್ನು ಹೆಣ್ಣಿನ ದೃಷ್ಟಿಕೋನದಿಂದಲೇ ಅರ್ಥಮಾಡಿಕೊಂಡು ಗಂಡು ಸ್ಪಂದಿಸಿದರೆ ಮಾತ್ರ ದಾಂಪತ್ಯದ ಕಾಮಸಂಬಂಧ ಸಮೃದ್ಧವಾದೀತು.

ಸಂಗಾತಿಗಳ ನಡುವೆ ಸಮಾನ ಭಾವವಿದ್ದರೂ ಮೌಲ್ಯಗಳ ಹೊಂದಾಣಿಕೆ ಇಲ್ಲದಿರುವುದರಿಂದ ದಾಂಪತ್ಯದಲ್ಲಿ ಸಾಮರಸ್ಯ ತಂದುಕೊಳ್ಳಲು ಸಾಧ್ಯವಾಗದು. ಸಂಸ್ಕಾರದಲ್ಲಿ ವ್ಯತ್ಯಾಸ, ಪ್ರಾಮಾಣಿಕತೆ-ಅಪ್ರಾಮಾಣಿಕತೆಯ ಗೊಂದಲ, ಭಿನ್ನ ರೀತಿಯ ಬದುಕನ್ನು ಬದುಕುವ ಅಭಿಲಾಷೆ, ಮಕ್ಕಳನ್ನು ಬೆಳೆಸುವ ವಿಷಯದಲ್ಲಿ ಭಿನ್ನಾಭಿಪ್ರಾಯ — ಇವೆಲ್ಲವೂ ದಾಂಪತ್ಯವನ್ನು ಕಾಡುತ್ತ ಒಡನಾಟದಿಂದ ದೂರವಿರಿಸುತ್ತವೆ.

ಹೀಗೆ ಹತ್ತುಹಲವು ಮನೋಸಾಮಾಜಿಕ ಹಾಗೂ ಅಂತರ್ವೈಯಕ್ತಿಕ ಕಾರಣಗಳಿಂದ ದುಃಖ, ನೋವು, ಭ್ರಮನಿರಸನ ಅನುಭವಿಸಿದ ದಂಪತಿಗಳು ನನ್ನ ಹತ್ತಿರ ಬಂದಿದ್ದಾರೆ. ಚಿಕಿತ್ಸೆಯ ಮೂಲಕ ಅವರ ನೋವನ್ನು ಹೊರತಂದು ಗಾಯ ಮಾಯುವಂತೆ ನೆರವು ನೀಡಿದಾಗ ಅವರು ಗುಣಹೊಂದಿ ಆರೋಗ್ಯಕರ ದಾಂಪತ್ಯ ನಡೆಸುವ ಹಾಗಾಗಿದ್ದಾರೆ. ಅವರ ದೃಷ್ಟಾಂತಗಳನ್ನು ವಿಷಯವಸ್ತುವಾಗಿ ಇಟ್ಟುಕೊಂಡು ಒಂದೊಂದೇ ಪ್ರಕರಣವನ್ನು ಎಳೆಯೆಳೆಯಾಗಿ ಬಿಡಿಸಿಡುತ್ತಿದ್ದೇನೆ. ಇದೆಲ್ಲವೂ ದಾಂಪತ್ಯಕ್ಕೆ ಆರೋಗ್ಯಕರ ಎನ್ನುವುದೇ ನನ್ನ ಅಭಿಮತ. ಇದನ್ನು ಆಸಕ್ತಿಯಿಂದ ಗಮನಿಸಿ, ಯೋಚಿಸಿ, ಅಳವಡಿಸಿಕೊಂಡರೆ ದಾಂಪತ್ಯ ದಿವ್ಯವಾದೀತು.

ಇಷ್ಟಾದರೂ ಬೋರ್ ಆಗುತ್ತಿದೆ ಎನ್ನುವವರಿಗೆ ಒಂದು ಪ್ರಶ್ನೆ: ನೀವು ಬದಲಾಗಲು ತಯಾರಾಗಿದ್ದೀರಾ? ಹೌದಾದರೆ ಚೂಯಿಂಗ್ ಗಮ್ ಹೋಗಿ ಚಾಕಲೇಟು ಸವಿಯುವ ಅನುಭವವಾದೀತು!